ವಿಷಯ:- ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 177 (1507)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಕ್ರೀಡಾಂಗಣ ಕಟ್ಟಲು ನಿವೇಶನವನ್ನು ಗುರುತಿಸಲಾಗಿದೆ. ಆದರೆ ಸದರಿ ಜಮೀನನ್ನು ಕುಣಿಗಲ್ 'ಸ್ಪೆಡ್ ಫಾರಂ' ಇವರಿಂದ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಗೆ ಇನ್ನೂ ವರ್ಗಾಯಿಸಿರುವುದಿಲ್ಲ. ಸದರಿ ಸ್ಥಳವನ್ನು ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ. ಇದಾದ ನಂತರ ಕ್ರೀಡಾಂಗಣವನ್ನು ಕಟ್ಟಲು ಬೇಕಾಗುವ ಅಂದಾಜು ಪಟ್ಟಿ ಮತ್ತು ನಕಾಶೆಯನ್ನು ತಯಾರಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಟಿ.ಬಿ.ಜಯಚಂದ್ರ (ಶ್ರೀ ಮುದ್ದಹನುಮೇಗೌಡರ ಪರವಾಗಿ):- ಇದರಲ್ಲಿ ಮುಖ್ಯವಾಗಿ ಇರತಕ್ಕಂಥಾದ್ದು ಸ್ಪಡ್ ಫಾರಂನ ವ್ಯಾಪ್ತಿಯಲ್ಲಿರತಕ್ಕಂತಹ ಜಾಗವನ್ನು ಕೊಡಲು ಅವರು ಒಪ್ಪಿ ಬಹಳ ದಿವಸಗಳೇ ಆಗಿವೆ. ಅದು ವರ್ಗಾವಣೆ ಹಂತದಲ್ಲಿದೆ ಎಂದರೆ ಇದನ್ನು ಪೂರ್ತಿ ಮಾಡಲಿಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ಅವರು ಇದನ್ನು ಈಗಾಗಲೇ ಕೊಡುವುದಕ್ಕೆ ಒಪ್ಪಿರುವಂತಹ ಸಂದರ್ಭದಲ್ಲಿ ತಕ್ಷಣವೇ ಪೊಸಿಷನ್ ತೆಗೆದುಕೊಳ್ಳುವುದಕ್ಕೇನು ತೊಂದರೆಯಾಗಿದೆ? ಅಂದಾಜು ಪಟ್ಟಿಯನ್ನು ಮತ್ತು ನಕಾಶೆಯನ್ನು ತಯಾರಿಸುತ್ತೇವೆಂದು ಹೇಳಿದ್ದೀರಿ. ಈ ವರ್ಷದ ಪ್ರೋಗ್ರಾಂಗೆ ಇದನ್ನು ಸೇರಿಸಿಕೊಂಡು ಅದು ಬಂದ ನಂತರ ಕೆಲಸ ಪ್ರಾರಂಭ ಮಾಡುತ್ತೀರೋ?

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಅತಿ ಶೀಘ್ರದಲ್ಲೇ ಆ ಸ್ಥಳವನ್ನು ವರ್ಗಾಯಿಸಿಕೊಂಡು ಸ್ಪಡ ಫಾರಂ ಅವರಿಂದ ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಿಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ಜಾಗವೇನೋ ವರ್ಗಾವಣೆಯಾಗುತ್ತದೆ. ಕುಣಿಗಲ್‌ನಲ್ಲಿ ಸ್ಟೇಡಿಯಂ ಕೊಡಬೇಕೆನ್ನುವುದನ್ನು ಈ ವರ್ಷದಲ್ಲಿ ಸೇರಿಸಿಕೊಳ್ಳುತ್ತೀರೋ? ಅಂದಾಜು ಪಟ್ಟಿ ನಿಧಾನವಾಗಿ ಬರಲಿ. ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಪ್ಲಾನ್ ಪ್ರೋಗ್ರಾಂನಲ್ಲಿ ಇಟ್ಟುಕೊಳ್ಳುತ್ತೀರೋ? ಅದನ್ನು ಇಟ್ಟುಕೊಂಡರೆ ಸುಮಾರು 2 ತಿಂಗಳು ತಡವಾಗಿ ಬಂದರೂ ಕೂಡ ಕೆಲಸ ಪ್ರಾರಂಭ ಮಾಡಬಹುದು. ಕುಣಿಗಲ್‌ನಲ್ಲಿ

ಈಗಾಗಲೇ ಸಾಕಷ್ಟು ಕೈಗಾರಿಕೆಗಳು ಬಂದಿವೆ. ಇದರಿಂದಾಗಿ ಆ ಸ್ಥಳಕ್ಕೆ ಹೆಚ್ಚು ಮಹತ್ವ ಬಂದಿದೆ. ಆದ್ದರಿಂದ ಇಲ್ಲಿ ಕ್ರೀಡಾಂಗಣ ಇರುವುದು ಅವಶ್ಯಕವೆಂದು ಕೇಳುತ್ತಿದ್ದೇನೆ. ದಯಮಾಡಿ ಈ ವರ್ಷ ಸೇರಿಸುತ್ತೇವೆಂದು ಹೇಳಿ.

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಪರಿಶೀಲನೆ ಮಾಡಿ ಅಧಿಕಾರಿಗಳಿಗೆ ತಿಳಿಸಿ ಅದರ ವರದಿ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.

ಅಧ್ಯಕ್ಷರು:- ಏಕೆಂದರೆ ಅವರು ಕನ್ಸರ್ನ್ಡ್ ಮಂತ್ರಿಗಳು ಅಲ್ಲ.

ವಿಷಯ:- ಧಾರವಾಡ-ಹುಬ್ಬಳ್ಳಿ ನಡುವಣ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಜೋಡಿ ರಸ್ತೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 178 (1344)

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ-ಹುಬ್ಬಳ್ಳಿ ನಡುವಣ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಈವರೆಗೆ ಎಷ್ಟು ಕಿ.ಮೀ. ಡಾಂಬರೀಕರಣ ಪೂರ್ಣಗೊಂಡಿದೆ. ಅದರ ಪ್ರತಿ ಕಿ.ಮೀ. ವೆಚ್ಚ ಎಷ್ಟು ಪೂರ್ಣ ಒಂದು ವರ್ಷದಲ್ಲಿ ಖರ್ಚು ಮಾಡಿದ ಹಣವೆಷ್ಟು? (ವಿವರ ನೀಡುವುದು)

ಆ) ಈ ರಾಷ್ಟ್ರೀಯ ಹೆದ್ದಾರಿಯನ್ನು ಜೋಡಿ ರಸ್ತೆ ಮಾಡುವ ಅಗತ್ಯತೆ ಇರುವುದು ನಿಜವೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಈವರೆಗೆ 17 ಕಿ.ಮೀ. ಉದ್ದ ರಸ್ತೆಯನ್ನು ಬಲಪಡಿಸಿ, ಡಾಂಬರೀಕರಣ ಮಾಡಲಾಗಿದೆ. ಸದರಿ ಕಾಮಗಾರಿಗೆ ಪ್ರತಿ ಕಿ.ಮೀ.ಗೆ ಸರಾಸರಿ 29.42 ಲಕ್ಷ ರೂ. ವೆಚ್ಚವಾಗಿರುತ್ತದೆ. 1995-96ನೇ ಸಾಲಿನಲ್ಲಿ ಈ ಕಾಮಗಾರಿಗೆ 288.56 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಆ) ನಗರ ಮಿತಿಯಲ್ಲಿ ಬರುವ ರಸ್ತೆ ಜೋಡಿ ರಸ್ತೆ ಮಾಡುವ ಅಗತ್ಯವಿರುತ್ತದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಬೆಂಗಳೂರು ನಂತರದ ಎರಡನೇ ಮಹಾನಗರ ಧಾರವಾಡ-ಹುಬ್ಬಳ್ಳಿ ಈ ಮಹಾನಗರದ ಹೆದ್ದಾರಿಯ ರಸ್ತೆ ಈಗಾಗಲೇ 30 ಕಿಲೋ ಮೀಟರ್ ಇದ್ದು ಅದರಲ್ಲಿ 17 ಕಿಲೋ ಮೀಟರ್ ಮಾತ್ರ ಕೆಲಸ ಮಾಡಿದ್ದಾರೆ. ಉಳಿದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಇದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಜೋಡುರಸ್ತೆ ಮಾಡುವ ಅಗತ್ಯವಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದಕ್ಕೆ ನಗರ ಮಿತಿಯಲ್ಲಿ ಬರುವ ರಸ್ತೆ ಜೋಡಿ ರಸ್ತೆ ಮಾಡುವ ಅಗತ್ಯವಿರುತ್ತದೆಂದು ಹೇಳಿದ್ದಾರೆ. ಸಂತೋಷ. ಯಾವಾಗಿನಿಂದ ಈ ಜೋಡಿ ರಸ್ತೆಯನ್ನು ಪ್ರಾರಂಭ ಮಾಡುತ್ತಾರೆಂದು